ನಂಬಿಕೆ ಇಲ್ಲ.'

ಹರಿಲಾಲ್ ಉರಿಯುತ್ತ ನಿಂತಿದ್ದ.

ಕಸ್ತೂರ್‌ಬಾ ಕೊರಗುತ್ತ ಕೂತಿದ್ದರು.

'ಇನ್ನು ಯಾವುದರ ಬಗ್ಗೆ ನಿಮಗೆ ನಂಬಿಕೆ ಇದೆ? ನಿಮ್ಮ ಮಗನ ಮೇಲೇ ನಿಮಗೆ ನಂಬಿಕೆ ಇಲ್ಲ.'

'ಹೌದು; ಸಾಲ ಮಾಡ್ತೀಯ, ವಾಪಸ್ ಕೊಡೊಲ್ಲ. ಗಾಂಧಿ ಮಗ ಹೀಗ್ ಮಾಡ್ದ ಅಂತ ನನಗೆ ಕೆಟ್ಟ ಹೆಸರು ತರ್ತೀಯ.'

ಕಸ್ತೂರ್‌ಬಾ ನಡುವೆ ಬಾಯಿ ಹಾಕಿದರು.

'ಎಲ್ಲಾ ಮೊದ್ಲೇ ಯಾಕೆ ತೀರ್ಮಾನ ಮಾಡ್ತೀರ?' ಎಂದರು.

'ಹಿಂದಿನ ಅನುಭವದಿಂದ ಹೇಳ್ತಿದೀನಿ. ನನ್ ಹೆಸರು ಹೇಳಿ ಸಾಲ ತಗೋತಾನೆ, ಆಮೇಲೆ ಕುಡಿದು ಎಲ್ಲಾ ಕಳೀತಾನೆ. ನನಗೆ ಗೊತ್ತಿಲ್ವ?'

'ನಾನು ಕುಡಿಯೋದನ್ನ ಬಿಟ್ಟಿದ್ದೀನಿ ಅಪ್ಪ' ಎಂದ ಹರಿಲಾಲ್.

'ಹಿಂದೆ ಒಂದ್ ಸಾರಿ ಹೀಗೇ ಹೇಳಿದ್ದೆ. ಆಮೇಲೆ ನೀನು ಕುಡಿದು ಆಡ್ತಿದ್ದ ಲೀಲೆ ಎಲ್ಲಾ ನನ್ನ ಕಿವಿಗೆ ಬಿದ್ದಿತ್ತು.'

'ಈಗ ನನಗೆ ಸಹಾಯ ಮಾಡ್ತೀರೊ ಇಲ್ವೊ ಹೇಳಿ. ನೀವು ಅಂಗಡಿ ಹಾಕೋಕೆ ಹಣ ಕೊಡಿ. ಇಲ್ಲಿದ್ರೆ ನಾನು ಸಾಲ ಮಾಡ್ತೀನಿ.'

'ನಿನ್ನಿಷ್ಟ ಏನಾದ್ರು ಮಾಡ್ಕೊ' ಎಂದು ಗಾಂಧಿ ನೂಲು ತೆಗೆಯತೊಡಗಿದರು.

ಹರಿಲಾಲ್‌ನ ಹತ್ತಿರ ಬಂದ ಕಸ್ತೂರ್‌ಬಾ ಆತನನ್ನು ತಮ್ಮ ಕೋಣೆಗೆ ಕರೆದೊಯ್ದರು. ಒಂದಿಷ್ಟು ಬುದ್ಧಿವಾದ ಹೇಳಿದರು. ಆತ ಎಲ್ಲವನ್ನೂ ಕೇಳಿಸಿಕೊಂಡು 'ಹೋಗ್ತೀನಿ' ಎಂದ. ಕಸ್ತೂರ್‌ಬಾ 'ಊಟ ಮಾಡಪ್ಪ' ಎಂದು ತಾವೇ ಊಟಕ್ಕಿಟ್ಟು ಸಮಾಧಾನಿಸಿ ಕಳಿಸಿದರು. ಹರಿಲಾಲ್ ಮುಂಬೈ ಕಡೆ ಹೊರಟ.

ಸ್ವಲ್ಪ ದಿನಗಳಲ್ಲೇ ಹರಿಲಾಲ್ ಮತ್ತೆ ಬಂದ. ಹರಿಲಾಲ್ ಬಂದ ಎಂದರೆ ಏನೋ ಜಟಾಪಟಿ ನಡೆಯುತ್ತೆ ಅಂತ ಕಸ್ತೂರ್‌ಬಾಗೆ ಆತಂಕ. ಹರಿಲಾಲ್ ಪತ್ನಿಯ ಮರಣವಾಗಿತ್ತಲ್ಲ, ಮತ್ತೆ ಮದುವೆಯಾಗಿ ಹೊಸ ಸಂಸಾರ ಹೂಡಲು ಹರಿಲಾಲ್ ನಿರ್ಧರಿಸಿದ್ದ. ವಿಷಯ ತಿಳಿಸಲು ಗಾಂಧಿ ಬಳಿಗೆ ಬಂದಿದ್ದ. ಗಾಂಧಿ ಅಷ್ಟು ಸುಲಭವಾಗಿ ಸಮ್ಮತಿಸಲಿಲ್ಲ.

'ಮೊದಲ ಮದ್ವೆ ಆದಾಗ್ಲೆ ನನ್ನ ಮಾತು ಕೇಳ್ಲಿಲ್ಲ ನೀನು. ಈಗ ನನ್ನ ಒಪ್ಪಿಗೆ ಯಾಕ್ ಬೇಕು? ಗುಲಾಬ್‌ನ ಮದುವೆ ಆಗೋದನ್ನ ಮುಂದೂಡಿ ಸ್ವಲ್ಪ ದಿನ ಬ್ರಹ್ಮಚರ್ಯದಲ್ಲಿರು ಅಂದ್ರೆ ಮುನಿಸ್ಕೊಂಡು ಆಫ್ರಿಕಾದಿಂದ ವಾಪಸ್ ಬಂದಿದ್ದೆ ನೀನು. ಬದುಕಿನಲ್ಲಿ ಭದ್ರತೆ ಇಲ್ಲದೋನು ಇನ್ನೊಂದ್ ಮದ್ವೆ ಆಗಿ ಆ ಹೆಣ್ಣುಮಗಳಿಗೂ ಯಾಕೆ ಕಷ್ಟ ಕೊಡ್ತೀಯ?'

ಎಂದು ಗಾಂಧಿ ನೇರವಾಗಿ ನುಡಿದರು. ಕಸ್ತೂರ್‌ಬಾ ಮೂಕಸಾಕ್ಷಿಯಾಗಿ ನಿಂತಿದ್ದರು. ಹರಿಲಾಲ್, ಗಾಂಧಿ ಮಾತಿಗೆ ಎದುರಾಡದೆ ಬಿಡಲಿಲ್ಲ.

'ಏನೋ, ಅಪ್ಪ ಅಂತ ನಿಮಗೊಂದು ಮಾತು ತಿಳ್ಸೋಣ, ಒಪ್ಪಿಗೆ ಪಡೆಯೋಣ ಅಂತ ಬಂದೆ. ತಪ್ಪು ಮಾಡ್ದೆ ನಾನು' ಎಂದ.

ಗಾಂಧಿ ಹರಿಲಾಲ್ ಕಡೆ ನೋಡಿ ವ್ಯಂಗ್ಯದಿಂದ ಹೇಳಿದರು:

'ನೀನು ತಪ್ಪು ಮಾಡ್ತಿರೋದು ಮೊದಲೇನಲ್ವಲ್ಲ! ಅಪ್ಪನ ಒಪ್ಪಿಗೆ ಕೇಳೋದೇ ತಪ್ಪು ಅಂದ್ಕೊಂಡೋನ್ಗೆ ತಪ್ಪು ಒಪ್ಪು ಎಲ್ಲಿ ಗೊತ್ತು?'

'ಈಗ ತಪ್ಪು ಒಪ್ಪಿನ ವಿಷಯ ಬಿಟ್ಟು ಒಪ್ಪಿಗೆ ಕೊಡಿ.'

ಹರಿಲಾಲ್ ನೇರ ವಿಷಯಕ್ಕೆ ಬಂದ.

'ಆಯ್ತು. ನಾನು ಒಪ್ಪಿಗೆ ಕೊಡ್ತೀನಿ. ಆದ್ರೆ ಒಂದು ಷರತ್ತು' ಎಂದರು ಗಾಂಧಿ.

'ಷರತ್ತು' ಎಂದ ಕೂಡಲೇ ಕಸ್ತೂರ್‌ಬಾಗೆ ಕಳವಳ ಶುರುವಾಯಿತು. 'ಇವರು ಷರತ್ತಿಲ್ಲದೆ ಸತ್ಯಾಗ್ರಹಾನೂ ಮಾಡೊಲ್ಲ. ಒಪ್ಪಿಗೇನೂ ಕೊಡೊಲ್ಲ' ಎಂದು ಒಳಗೇ ಅಂದುಕೊಂಡು ಯಾವ ಷರತ್ತು ವಿಧಿಸುವರೊ ಎಂದು ಕಾತರಗೊಂಡರು. ಗಾಂಧಿ ಹೇಳಿದರು: 'ನೋಡು ಹರಿ, ನೀನು ಮದ್ವೆ ಆಗು, ಬೇಡ ಅನ್ನೊಲ್ಲ. ನನ್ನ ಷರತ್ತು ಇಷ್ಟೇ. ಯಾರಾದ್ರು ವಿಧವೇನ ಮದ್ವೆ ಆಗು. ಆಕೆಗೆ ಹೊಸ ಜೀವನ ಕೊಡು.'

'ಎಲ್ಲಾ ನೀವು ಹೇಳಿದ ಹಾಗೇ ಕೇಳೋಕ್ ಆಗಲ್ಲ.'

ಎಂದು ಹರಿಲಾಲ್ ಕಡ್ಡಿ ತುಂಡು ಮಾಡಿದಂತೆ ಹೇಳಿದ. ಈಗಾಗಲೇ ಅವನು ತನ್ನ ಎರಡನೇ ಮದುವೆಯ ಬಗ್ಗೆ ನಿರ್ಧಾರಕ್ಕೆ ಬಂದಿದ್ದ. ಔಪಚಾರಿಕ ಒಪ್ಪಿಗೆಗಾಗಿ ಗಾಂಧಿ ಬಳಿಗೆ ಬಂದಿದ್ದ.

'ನಿನಗೆ ಉದ್ಧಾರ ಆಗೋ ಮನಸ್ಸಿಲ್ಲ. ಏನಾದ್ರೂ ಮಾಡ್ಕೊ. ನಿನಗೂ ನನಗೂ ಸಂಬಂಧ ಇಲ್ಲ' ಎಂದರು ಗಾಂಧಿ.

ಹರಿಲಾಲ್ ಹಿಂದೆ ಮುಂದೆ ನೋಡದೆ 'ನೀವ್ ಎಷ್ಟಾದ್ರೂ ಮಹಾತ್ಮರು. ನಾನು ಹುಲುಮಾನವ. ಬರ್ತೀನಿ' ಎಂದು ಹೊರಟೇ ಬಿಟ್ಟ.

ಕಳವಳದಿಂದ ಕಂಗಾಲಾಗಿದ್ದ ಕಸ್ತೂರ್‌ಬಾ 'ಹರಿ... ಹರಿ' ಎಂದು ಕೂಗುತ್ತ ಹರಿಲಾಲ್‌ನ ಹಿಂದೆ ಹೋದರು. ತಾಯಿಯ ಕರೆಗೆ ಆತ ನಿಂತುಕೊಂಡ. ಕೈಹಿಡಿದು ತಮ್ಮ ಕೋಣೆಗೆ ಕರೆದೊಯ್ದರು. 'ಊಟ ಮಾಡು' ಎಂದರು. ಆತ 'ಬೇಡ' ಎಂದ. 'ನೀನ್ ಊಟ ಮಾಡ್ದಿದ್ರೆ ನಾನೂ ಉಪವಾಸ ಇರ್ತೀನಿ' ಎಂದರು ತಾಯಿ. ಹರಿಲಾಲ್ 'ಓ... ಗಂಡನ ಚಾಳಿ ನಿನಗೂ ಅಭ್ಯಾಸ ಆಗಿದೆ' ಎಂದ.

ಕಸ್ತೂರ್‌ಬಾ ಕಣ್ಣಲ್ಲಿ ಸುಡುನೀರು ಸಿಡಿಯಿತು. ಮಾತಾಡಲಿಲ್ಲ. ನೋಡಿದರು. ತಾಯಿಯ ಆ ಒಂದು ನೋಟ ಹರಿಯನ್ನು ಕಲಕಿತು.

'ಊಟಕ್ಕಿಡು ಅಮ್ಮ, ಹಸಿವಾಗಿದೆ.'

ಹರಿಯಿಂದ ಬಂದ ಮಾತು ಕೇಳಿ ಕಸ್ತೂರ್‌ಬಾ ಮನದಲ್ಲಿ ಸಣ್ಣಪುಳಕ.

ತಕ್ಷಣ ಊಟಕ್ಕೆ ಸಿದ್ಧಮಾಡಿದರು. ಮಗನಿಗೆ ಬಡಿಸಿದರು. ಮಗ ಊಟ ಮಾಡುವುದನ್ನು ಕಣ್ತುಂಬಿಕೊಂಡರು. ಹರಿಯ ಊಟವಾದ ಮೇಲೆ ಮೃದುವಾಗಿ ಹೇಳಿದರು:

'ನೀನೂ ಯಾಕ್ ಹಟ ಮಾಡ್ತೀಯ ಹರಿ. ಅಪ್ರ್ ಹೇಳಿದ ಹಾಗೆ ಒಬ್ಬ ವಿಧವೇನ ಮದುವೆ ಆಗು.'

'ಅಮ್ಮ, ಮದ್ವೆ ಆಗಿ ಬಾಳ್ ಮಾಡ್ ಬೇಕಾಗಿರೋನ್ ನಾನು. ನಾನೀಗಾಗ್ಲೆ ನಿರ್ಧಾರ ಮಾಡಿದ್ದೀನಿ.'

'ಅವ್ರು ಹೊರಗಡೆ ಒರಟು ಅನ್ನಿಸಬಹುದು. ಆದ್ರೆ ಒಳಗಡೆ ಅಂತಃಕರಣ ಇದೆ.'

'ನನಗೂ ಅವ್ರಿಗೂ ಸಂಬಂಧ ಇಲ್ಲ ಅಂತ ಹೇಳಿದ್ ಮೇಲೆ ಎಂಥ ಅಂತಃಕರಣ ಅದು?'

'ಮಾತಿಗ್ ಮಾತ್ ಬೆಳೆದಾಗ ಅಂಥ ಮಾತ್ ಬಂದ್ ಬಿಡುತ್ತೆ ಹರಿ. ಆದ್ರೆ ಅದೇ ನಿಜ ಆಗಿರೊಲ್ಲ. ಅರ್ಥ ಮಾಡ್ಕೊ.'

'ನೀನ್ ಅರ್ಥ ಮಾಡ್ಕೊ ಸಾಕು.'

ಎಂದು ಹರಿಲಾಲ್ ಎದ್ದೇ ಬಿಟ್ಟ.

'ಬರ್ತೀನಮ್ಮ' ಎಂದು ಹೊರಟೇಬಿಟ್ಟ.

ಕಸ್ತೂರ್ ಬಾ ನಿಂತಲ್ಲೇ ನಿಂತರು ಕಲ್ಲಿನಂತೆ!
ಕರಗುತ್ತಿರುವ ಕಲ್ಲಿಗೂ ಆಸರೆ ಇಲ್ಲದಂತೆ!
ಮತ್ತದೇ ತೂಗುಯ್ಯಾಲೆಯ ಉರಿಯಂತೆ.
ಮುಂದೆ ಹೋದರೆ ಕಟ್ಟುನಿಟ್ಟಿನ ಪತಿ;
ಹಿಂದೆ ಬಂದರೆ ಕಟ್ಟು ಬಿಟ್ಟ ಪುತ್ರ.
ತೂಗುಯ್ಯಾಲೆಯ ಹಗ್ಗವೊಂದೆ..
ಆಡುತ್ತಲೇ ಇದೆ ಹಿಂದೆ ಮುಂದೆ.
ಮುರಿದಿಲ್ಲ ಹಗ್ಗ ಕಟ್ಟಿದ ಕೊಂಬೆ.
ಕರುಳಬಳ್ಳಿಯ ಹಗ್ಗ ಹರಿಯುವುದಿಲ್ಲ.
ಬೇರು ಬಿಟ್ಟ ಮರ ಮರಿಯುವುದಿಲ್ಲ.

ತುಂಬಿದ ಕಸ್ತೂರ್ ಬಾ ಕಣ್ಣುಗಳಲ್ಲಿ ನೆನಪಿನ ಒರತೆ.

ಹರಿಲಾಲ್ ಹೀಗೆ ಆಗಲು ಆತನೊಬ್ಬನೇ ಕಾರಣನೆ?

ತಾಯಿ–ತಂದೆಯರಾದ ತಮ್ಮ ಜವಾಬ್ದಾರಿಯೂ ಇಲ್ಲವೆ ಎಂದು ಕಸ್ತೂರ್ ಬಾ ಕರುಳು ಕೇಳಿತು. ಸಂಕಟ ತಡೆಯಲಾರದೆ ಹೊರಬಂದ ಕಣ್ಣ ಹನಿಗಳೇ ಭೂತ–ಕನ್ನಡಿಯಾದವು. ನಡೆದ ಘಟನೆಗಳನ್ನು ವರ್ತಮಾನದ ಮನಸ್ಸಿಗೆ ತಂದವು.

ಅಂದು ಹರಿಲಾಲ್ ತನ್ನ ಮದುವೆ ವಿಷಯಕ್ಕೆ ಗಾಂಧಿ ಜೊತೆ ಜಗಳವಾಡಿದ್ದ. ಫೀನಿಕ್ಸ್ ಆಶ್ರಮವನ್ನು ಹೇಳದೆ ಬಿಟ್ಟು ಹೋಗಿದ್ದ. ಸ್ವದೇಶಕ್ಕೆ ಬಂದು ಮದುವೆಯೂ ಆದ. ಸ್ವಲ್ಪ ಕಾಲಾನಂತರ ಮತ್ತೆ ಫೀನಿಕ್ಸ್ ಆಶ್ರಮಕ್ಕೆ ಬಂದ. ಕಸ್ತೂರ್ ಬಾ ಅವರಿಗೆ ಸೊಸೆಯನ್ನು ನೋಡುವ ಆಸೆ. ಕಡೆಗೆ ಗಾಂಧಿ ಒಪ್ಪಿಗೆಯೊಂದಿಗೆ ಹರಿಲಾಲ್, ಭಾರತಕ್ಕೆ ಬಂದು ಪತ್ನಿ ಗುಲಾಬ್ ಸಮೇತ ಮತ್ತೆ ದಕ್ಷಿಣ ಆಫ್ರಿಕಾದ ಫೀನಿಕ್ಸ್‌ಗೆ ಬಂದ. ಗಾಂಧಿಯವರ ಚಟುವಟಿಕೆಗಳಲ್ಲಿ ಭಾಗಿಯಾದ. ಹೋರಾಟಗಳಲ್ಲಿ ಒಂದಾದ. ಅಲ್ಲಿನ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದ್ದಕ್ಕಾಗಿ ಜೈಲುವಾಸವನ್ನೂ ಅನುಭವಿಸಿದ.

ಕಸ್ತೂರ್‌ಬಾ ಕಣ್ಣಲ್ಲಿ ಮಗ–ಸೊಸೆ ಸರಿದಾರಿಯಲ್ಲೇ ಇದ್ದರು. ಗಾಂಧಿಯವರಿಗೂ ಇವರ ನಡೆದಾರಿ ಸರಿಯೆನ್ನಿಸಿತ್ತು. ಯಾಕೆಂದರೆ ಆಶ್ರಮದ ನಿಯಮಗಳಿಗೆ ಎಲ್ಲರಂತೆ ಇವರೂ ಬದ್ಧರಾಗಿದ್ದರು. ಆದರೆ ಹರಿಲಾಲ್‌ನಲ್ಲಿ ತಾನೂ ಉನ್ನತ ವ್ಯಾಸಂಗ ಮಾಡಬೇಕೆಂಬ ಹಂಬಲದ ಬಳ್ಳಿ ಸುತ್ತಿಕೊಂಡಿತ್ತು. ಬಳ್ಳಿಯಲ್ಲಿ ಬಿಟ್ಟ ಹೂಗಳು ಉದುರಿ ಒಣಗಿ ಹೋಗಬಾರದೆಂಬ ಬಯಕೆ ಬಲವಾಗಿತ್ತು. ಹೀಗಿರುವಾಗ ಇಂಗ್ಲೆಂಡಿನಲ್ಲಿದ್ದ